	ಶ್ರಮಶಕ್ತಿ ಸಾಲ ಯೋಜನೆ	144.75	579
	ಮೈಕ್ರೋ ಸಾಲ ಯೋಜನೆ	29.20	292
	ಗಂಗಾಕಲ್ಯಾಣ ಯೋಜನೆ	28.50	19
	ಸ್ವಾವಲಂಬನ ಸಲ ಯೋಜನೆ	3.50	30
	ಮಸೀದಿ ದುರಸ್ಥಿ ಮತ್ತು ನವೀಕರಣ	19.75	07
	ಮುಯಿಜನ್/ಪೇಶ್ಇಮಾಮ್‌ಗಳಿಗೆ ಗೌರವಧನ	120.84	–
2015–16	ಬಿದಾಯಿ ಯೋಜನೆ	14.50	29
	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ	6.32	158
	ಶ್ರಮಶಕ್ತಿ ಸಲ ಯೋಜನೆ	100.00	400
	ಸ್ವಾವಲಂಬನ ಸಾಲ ಯೋಜನೆ	10.00	40
	ಮುಯಿಜನ್/ಪೇಶ್ಇಮಾಮ್‌ಗಳಿಗೆ ಗೌರವಧನ	45.72	–

ರಸ್ತೆಗಳ ಅಗಲೀಕರಣ

5382 (4987); ಶ್ರೀ ಮೋಹಿಯುದ್ದೀನ್ ಬಾವಾ ಬಿ. ಎ. (ಮಂಗಳೂರು ನಗರ ಉತ್ತರ)

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು– ಧರ್ಮಸ್ಥಳ– ಬಿ. ಸಿ. ರೋಡ್ ರಾಜ್ಯ ಹೆದ್ದಾರಿ ರಸ್ತೆಗಳು ಚಿಕ್ಕದಾಗಿದ್ದು, ಸಾರ್ವಜನಿಕರ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಸ್ತೆಗಳ ಅಗಲೀಕರಣಗೊಳಿಸಲು ಉದ್ದೇಶಿಸಿದ್ದಲ್ಲಿ, ಭೂ ಮಾಲೀಕರಿಗೆ ಯಾವ ಮೂಲದಿಂದ ಪರಿಹಾರ ದೊರಕಿಸಿಕೊಡಲಾಗುವುದು; (ವಿವರ ನೀಡುವುದು)?

ಡಾ: ಹೆಚ್ಚ. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು–ಬಿ.ಸಿ. ರೋಡ್–ಧರ್ಮಸ್ಥಳ ರಸ್ತೆಯಲ್ಲಿ ಮಂಗಳೂರು–ಬಿ.ಸಿ.ರೋಡ್–ಬೆಳ್ತಂಗಡಿ–ಉಜಿರೆ ತನಕದ ರಸ್ತೆಯು ರಾಷ್ಟ್ರೀಯ ಹೆದ್ದಾರಿ–234 ಆಗಿದ್ದು, ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ 2015–16ರ ಅನುಮೋದಿತ ವಾರ್ಷಿಕ ಯೋಜನೆಯಡಿ ರೂ. 202.00 ಕೋಟಿಗಳಿದ್ದು, ಪ್ರಸ್ತಾವನೆಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಈಗಾಗಲೇ ಸಲ್ಲಿಸಲಾಗಿದ್ದು, ಅನುಮೋದನೆ ದೊರೆತ ನಂತರ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ಉಳಿದಂತೆ, ಉಜಿರೆಯಿಂದ ಧರ್ಮಸ್ಥಳಕ್ಕೆ ಸಂಪರ್ಕ ಕಲ್ಪಿಸುವ 10.00 ಕಿ.ಮೀ. ಉದ್ದದ (ಚೈನೇಜ್ 52.00 ಕಿ.ಮೀ. ಯಿಂದ 62.00 ಕಿಮೀ) ರಸ್ತೆಯು ಸುಬ್ರಹ್ಮಣ್ಯ–ಉಡುಪಿ ರಾಜ್ಯ ಹೆದ್ದಾರಿ–37 ಆಗಿದ್ದು, ದ್ವಿಪಥ ರಸ್ತೆಯಾಗಿದ್ದು, ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಮುಂದಿನ ದಿನಗಳಲ್ಲಿ ವಾಹನ ಸಾಂದ್ರತೆಗನುಗುಣವಾಗಿ ರಸ್ತೆ ಅಗಲೀಕರಣ ಮಾಡಬೇಕಾಗುತ್ತದೆ. ರಸ್ತೆ ಅಗಲೀಕರಣ ಮಾಡುವಾಗ ಭೂಮಾಲೀಕರಿಗೆ ಆಯವ್ಯಯದಲ್ಲಿ ದೊರೆಯುವ ಅನುದಾನದಲ್ಲಿ ಆದ್ಯತೆಯ ಮೇಲೆ ಪರಿಹಾರ ದೊರಕಿಸಿಕೊಡಲಾಗುವುದು.